# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 11 ಪ್ರಾ.ಸಾ. : 10**

| | | |
|---|---|---|
| ಸಾಕ್ಷಿಯ ಹೆಸರು | : | ಜಮಾಲ್ ಸಾಬ ಇಬ್ರಾಹಿಂ ಸಾಬ ಶೇಖ |
| ತಂದೆಯ ಹೆಸರು | : | ಇಬ್ರಾಹಿಂ ಸಾಬ ಶೇಖ |
| ವಯಸ್ಸು | : | 40 ವರ್ಷ |
| ಕೆಲಸ | : | ಚಾಲಕ |
| ವಾಸ | : | ಹಾಲಿಕೇರಿ, ಚಂದಾವರ, ತಾಃ ಹೊನ್ನಾವರ |

**ದಿನಾಂಕಃ 19-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ನಾನು ನನ್ನ ಕುಟುಂಬದೊಂದಿಗೆ ಚಂದಾವರದ ಹಾಲಿಕೇರಿಯಲ್ಲಿ ವಾಸವಾಗಿರುತ್ತೇನೆ. ಚಾಸಾ-12 ಅಬ್ದುಲ್ ಕರೀಂ ನನ್ನ ಮಾವ. ಮೃತ ಅಬುತಾಲಿಬ್ ನನಗೆ ಗೊತ್ತು, ಅವರು ಜನತಾ ಕಾಲೋನಿಯಲ್ಲಿ ವಾಸವಾಗಿದ್ದರು, ಚಾಸಾ-1 ಅವರ ಪತ್ನಿ, ಮೃತ ಹಾಗೂ ಚಾಸಾ-1 ರವರಿಗೆ ಮೂವರು ಮಕ್ಕಳಿದ್ದು, ಚಾಸಾ-19 ರವರು ಅವರ ಮಗನಿರುತ್ತಾನೆ. ಈಗ ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣುತ್ತಿರುವ ಆರೋಪಿ ನನಗೆ ಗೊತ್ತು, ಅವನೂ ಸಹ ಜನತಾ ಕಾಲೋನಿಯ ವಾಸಿಯಾಗಿರುತ್ತಾನೆ. ನಾವು ಮಸೀದಿಗೆ ಹೋಗಬೇಕಾದರೆ ಆರೋಪಿಯ ಮನೆಯ ಮುಂದಿನ ರಸ್ತೆಯ ಮೂಲಕ ಹೋಗುತ್ತೇವೆ. ಸದರಿ ರಸ್ತೆಯು ಮಣ್ಣಿನ ರಸ್ತೆಯಾಗಿರುತ್ತದೆ.

2. ದಿ. 03-05-2021 ರಂದು ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-12 ರವರು ಮಸೀದಿಗೆ ಹೋಗಲು ಆರೋಪಿಯ ಮನೆಯ ಮುಂದಿನ ರಸ್ತೆಯ ಮೂಲಕ ಹೋಗುತ್ತಿರುವಾಗ, ಚಾಸಾ-14/ ಹೀನಾ ಕೌಸರ್ ರವರ ಮನೆಯ ಮುಂದೆ ಮೃತ ಅಬುತಾಲಿಬ್ ಹಾಗೂ ಆರೋಪಿಯ ನಡುವೆ ಜಗಳವಾಗುತ್ತಿತ್ತು. ನಾವು ಜಗಳವನ್ನು ಬಿಡಿಸಿ, ಅವರಿಗೆ ಸಮಾಧಾನ ಮಾಡಿರುತ್ತೇವೆ, ಅಲ್ಲಿ ಅಬುತಾಲಿಬ್ ರವರು ಆರೋಪಿಗೆ ಉದ್ದೇಶಿಸಿ, "ಕೇರಿಯ ಹೆಂಗಸರಿಗೆ ಯಾಕೆ ತೊಂದರೆ ಕೊಡುತ್ತೀಯಾ ಹಾಗೂ

ಅಜರುದ್ದೀನ್ ರವರ ಹೆಂಡತಿಯಾದ ಅಂಜುಂ ರವರಿಗೆ ಯಾಕೆ ಲುಂಗಿ ಎತ್ತಿ ತೋರಿಸಿ, ಅಸಭ್ಯವಾಗಿ ವರ್ತಿಸಿದೆ" ಎಂದು ಕೇಳಿದಾಗ, ಆರೋಪಿಯು ಅಬುತಾಲಿಬ್ ಗೆ ಉದ್ದೇಶಿಸಿ, "ನನ್ನನ್ನು ಕೇಳಲು ನೀನು ಯಾರು?, ರಾಂಡಕೇ ಬೇಟೆ" ಎಂದು ಬೈದಿದ್ದು, ಆಗ ಅಬುತಾಲಿಬ್ ರವರು ಆರೋಪಿಗೆ, "ನೀನು ಹೀಗೆ ಮಾಡಿದರೆ, ನಿನ್ನ ಮೇಲೆ ಪೊಲೀಸರಿಗೆ ದೂರು ನೀಡಿ, ಒಳಗೆ ಹಾಕಿಸುತ್ತೇನೆ" ಎಂದು ಹೇಳಿದಾಗ, ಆರೋಪಿಯು ತನ್ನ ಮನೆಗೆ ಹೋಗಿ ಒಂದು ಚಾಕುವನ್ನು ಕೈಯಲ್ಲಿ ಹಿಡಿದುಕೊಂಡು ಬಂದಿದ್ದು, ನಾವು ಆತನಿಗೆ ಜಗಳ ಮಾಡದಂತೆ ಸಮಾಧಾನ ಮಾಡಿರುತ್ತೇವೆ. ಆದರೂ ಸಹ ಆರೋಪಿಯು ಅಬುತಾಲಿಬ್ ರವರನ್ನುದ್ದೇಶಿಸಿ, "ಬೇರೆಯವರ ಹೆಂಡತಿಯ ವಿಷಯವಾಗಿ ನನ್ನ ಸುದ್ದಿಗೆ ಬಂದರೆ, ನಿನ್ನನ್ನು ಕೊಲೆ ಮಾಡಿಬಿಡುತ್ತೇನೆ" ಎಂದು ಹೇಳಿ, ತನ್ನ ಕೈಯಲ್ಲಿದ್ದ ಚಾಕುವಿನಿಂದ ತಿವಿಯಲು ಬಂದಿದ್ದು, ಆಗ ಅಬುತಾಲಿಬ್ ರವರು ಅಲ್ಲಿಯೇ ಬಿದ್ದಿದ್ದ ಅಡಿಕೆ ಮರದ ದಬ್ಬೆಯನ್ನು ತೆಗೆದುಕೊಂಡು ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಬೀಳಿಸಲು ಆತನ ಕೈಗೆ ಹೊಡೆದಾಗ, ಆರೋಪಿಯು "ನಿನ್ನನ್ನು ಕೊಲೆ ಮಾಡುತ್ತೇನೆ" ಎಂದು ಹೇಳಿ, ತನ್ನ ಕೈಯಲ್ಲಿದ್ದ ಚಾಕುವಿನಿಂದ ಅಬುತಾಲಿಬ್ ರವರ ಎದೆಗೆ ಚುಚ್ಚಿದ್ದು, ಅವರ ಎದೆಯಿಂದ ರಕ್ತ ಬಂದಿರುತ್ತದೆ ಹಾಗೂ ಅಬುತಾಲಿಬ್ ರವರು ಕೆಳಗೆ ಬಿದ್ದಿರುತ್ತಾರೆ, ನಂತರ ಆರೋಪಿಯು ತನ್ನ ಕೈಯಲ್ಲಿ ಚಾಕುವನ್ನು ಹಿಡಿದುಕೊಂಡು ಮನೆಗೆ ಹೋಗಿರುತ್ತಾನೆ. ಆಗ ಸಮಯ ಮಧ್ಯಾಹ್ನ 1.15 ಗಂಟೆಯಾಗಿತ್ತು. ಸ್ಥಳದಲ್ಲಿದ್ದ ನಾವುಗಳೆಲ್ಲಾ ಸೇರಿ, ಅಬುತಾಲಿಬ್ ರವರಿಗೆ ಉಪಚರಿಸಿದ್ದು, ನಂತರ ಅವರ ಹೆಂಡತಿಯಾದ ಚಾಸಾ-1, ಅವರ ಮಗ ಚಾಸಾ-19 ಮತ್ತು ಚಾಸಾ-13 ಹೀನಾ ಕೌಸರ್ ರವರು ಸೇರಿ, ಚಾಸಾ-16 ರವರ ಆಟೋದಲ್ಲಿ ಅಬುತಾಲಿಬ್ ರವರನ್ನು ಕುಮಟಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆನಂತರ 1.50 ಸುಮಾರಿಗೆ ಅಬುತಾಲಿಬ್ ರವರು ಮೃತಪಟ್ಟಿರುತ್ತಾರೆ ಎಂದು ವಿಷಯ ತಿಳಿದುಬಂದಿರುತ್ತದೆ.

3. ಆರೋಪಿ ಹಾಗೂ ಅಬುತಾಲಿಬ್ ರವರ ನಡುವೆ ಜಗಳವಾಗುವ ಸಮಯದಲ್ಲಿ ಚಾಸಾ-10 ಅಜರುದ್ದೀನ್ ರವರು ಚಾಸಾ-14 ಹೀನಾ ಕೌಸರ್ ರವರ ಮನೆಯ ಕಂಪೌಂಡಿನಲ್ಲಿ ನಿಂತು ತನ್ನ ಮೊಬೈಲಿನಿಂದ ಜಗಳವಾಗುತ್ತಿರುವ ದೃಶ್ಯವನ್ನು ವೀಡಿಯೋ ಮಾಡಿರುತ್ತಾನೆ. ಗಲಾಟೆಯಾದ ನಂತರದಲ್ಲಿ ಚಾಸಾ-10 ರವರ ಮೊಬೈಲಿನಲ್ಲಿ ರೆಕಾರ್ಡ್ ಆಗಿದ್ದ ವೀಡಿಯೋವನ್ನು ನಾನು ನೋಡಿರುತ್ತೇನೆ. ಘಟನೆಯನ್ನು ನೋಡಿದ ಬಗ್ಗೆ ಪೊಲೀಸರಿಗೆ ಹಾಗೂ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದೆ

ನೀಡಿದ ಹೇಳಿಕೆಯನ್ನು ನಿಪಿ–53 ಎಂದು, ಸಾಕ್ಷಿಯ ಸಹಿಯನ್ನು ನಿಪಿ–53(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ–10 ರವರ ಮೊಬೈಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–11 ಎಂದು ಗುರುತಿಸಲಾಗಿರುತ್ತದೆ. ಸದರಿ ಮೊಬೈಲಿನಲ್ಲಿದ್ದ ಘಟನೆಗೆ ಸಂಬಂಧಿಸಿದ ವೀಡಿಯೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ವೀಡಿಯೋದಲ್ಲಿ ಆರೋಪಿಯು ಅಬುತಾಲಿಬ್ ಗೆ ಚಾಕುವಿನಿಂದ ಚುಚ್ಚಿರುವುದನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಸದರಿ ವೀಡಿಯೋದಲ್ಲಿ ತಾನು ಹಾಗೂ ತನ್ನ ಮಾವ ಚಾಸಾ–12 ರವರೂ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಎಂ.ಓ–2 ಚಾಕುವನ್ನು, ಎಂ.ಓ–7 ಬಡಿಗೆಯನ್ನು, ಆ ದಿನ ಆರೋಪಿ ಧರಿಸಿದ್ದ ಎಂ.ಓ–1 ಶರ್ಟ್, ಎಂ.ಓ–3 ಲುಂಗಿಯನ್ನು ಹಾಗೂ ಅಬುತಾಲಿಬ್ ರವರ ಎಂ.ಓ–5 ಕನ್ನಡಕ, ಎಂ.ಓ–6 ಚಪ್ಪಲಿ, ಎಂ.ಓ–8 ಲುಂಗಿ, ಎಂ.ಓ–9 ಶರ್ಟ್, ಎಂ.ಓ–10 ನಿಕ್ಕರ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

4. ಸದರಿ ಘಟನೆ ನಡೆಯುವ ಸಮಯದಲ್ಲಿ ಸ್ಥಳದಲ್ಲಿ ಮೃತ ಅಬುತಾಲಿಬ್ ರವರ ಹೆಂಡತಿ ಚಾಸಾ–1, ಅವರ ಮಗ ಚಾಸಾ–19, ಚಾಸಾ–13 ಹೀನಾ ಕೌಸರ್ ಮುಲ್ಲಾ, ಚಾಸಾ–14 ಹೀನಾ ಕೌಸರ್ ಸಿಕಂದರ್, ಚಾಸಾ–10 ಮೊಹಮ್ಮದ್ ಅಜರುದ್ದೀನ್, ಚಾಸಾ–15 ಅಂಜುಮ್, ಚಾಸಾ–18 ಕಲೀಮುದ್ದೀನ್, ಚಾಸಾ–20 ರಿಂದ 25 ರವರು ಹಾಗೂ ಇನ್ನೂ ಕೆಲವರು ಇದ್ದರು. ಹೊನ್ನಾವರದ ಪೊಲೀಸರು ಕ್ಯಾಮೆರಾದಲ್ಲಿ ನನ್ನ ಹಾಗೂ ಚಾಸಾ–12 ರವರ ಫೋಟೊ ತೆಗೆದಿರುತ್ತಾರೆ. ಸಾಕ್ಷಿಯು ತನ್ನ ಫೋಟೊವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–50 ಎಂದು ಗುರುತಿಸಲಾಗಿದೆ. ಅದೇ ರೀತಿ ಸಾಕ್ಷಿಯು ಚಾಸಾ–12 ರವರ ಫೋಟೊವನ್ನೂ ಸಹ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–51 ಎಂದು ಗುರುತಿಸಲಾಗಿದೆ.

5. ಈ ಘಟನೆ ನಡೆಯವ ಪೂರ್ವದಲ್ಲಿ ಚಾಸಾ–14 ಹೀನಾ ಕೌಸರ್ ಸಿಕಂದರ್ ರವರು ಆರೋಪಿಯ ವಿರುದ್ಧ ಹೊನ್ನಾವರದ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದರು. ಸಾಕ್ಷಿಯು ಮುಂದುವರಿದು, ಆರೋಪಿಯು ಯಾವಾಗಲೂ ತನ್ನ ಕೈಯಲ್ಲಿ ಚಾಕುವನ್ನು ಹಿಡಿದುಕೊಂಡು ಓಡಾಡುತ್ತಿದ್ದನು ಹಾಗೂ ಕೇರಿಯ ಹೆಣ್ಣುಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸುತ್ತಾ, ತೊಂದರೆ

ಕೊಡುತ್ತಿದ್ದನು. ಆತ ಯಾವಾಗಲೂ ಚಾಕು ಹಿಡಿದುಕೊಂಡು ಹೆದರಿಸುತ್ತಿದ್ದ ಕಾರಣ, ನಾವು ಆತನನ್ನು ಹಿಡಿದುಕೊಳ್ಳಲು ಹೋಗಿರಲಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.